8. ಗಮನ ಸೆಳೆಯುವ ಸೂಚನೆ

ವಿಷಯ: ವಿಜಯಪುರ ಜಿಲ್ಲೆ ಮನಗೂಳಿ–ಬಿಜ್ಜಳ (ತಾಳಿಕೋಟಿ) ದೇವಾಪುರ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಯು ಪ್ರಾರಂಭಗೊಳ್ಳದೆ ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ವಿಜಯಪುರ ಜಿಲ್ಲೆ ಮನಗೂಳಿ–ಬಿಜ್ಜಳ (ತಾಳಿಕೋಟಿ) ದೇವಾಪುರ ರಾಜ್ಯ ಹೆದ್ದಾರಿ ಬಗ್ಗೆ ಟೆಂಡರ್ ಕರೆಯುವ ವಿಚಾರದಲ್ಲಿ ತಡವಾಗಿದ್ದು, ಟೆಂಡರ್ ಅನ್ನು ತೀವ್ರಗತಿಯಲ್ಲಿ ಕರೆದು ಕೆಲಸ ಪ್ರಾರಂಭಿಸುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮನಗೂಳಿ–ಬಸವನಬಾಗೇವಾಡಿ–ತಾಳಿಕೋಟೆ–ಹುಣಸಗಿ–ದೇವಾಪುರ **ರಾಜ್ಯ ಹೆದ್ದಾರಿ–61** ರಲ್ಲಿ 110 ಕಿಮೀ ಉದ್ದದ ರಸ್ತೆ ಅಭಿವೃದ್ಧಿಯನ್ನು ವಿಶ್ವಬ್ಯಾಂಕ್ ನೆರವಿನಡಿಯಲ್ಲಿ (DBFOMT (Annuity) ಆನ್ಯೂಟಿ ಗುತ್ತಿಗೆ ಆಧಾರದಲ್ಲಿ ಕೆಶಿಪ್ ವತಿಯಿಂದ ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು. ಸದರಿ ಕಾಮಗಾರಿಗೆ ಸ್ವೀಕೃತ ಟೆಂಡರ್ ಬಿಡ್ ಸ್ಪರ್ಧಾತ್ಮಕವಾಗಿಲ್ಲದೇ, ಹೆಚ್ಚಿನ ಮೊತ್ತ ನಮೂದಿಸಿದ ಕಾರಣ ಹಾಗೂ ಈ ಮೊತ್ತ GOI/NHAI ಸಂಸ್ಥೆಯು ಮಾಡಿರುವ enquity IRR ಮಾನದಂಡ ಶೇಕಡ 18 ಕ್ಕಿಂತ ಹೆಚ್ಚಾಗಿರುವುದರಿಂದ ಯೋಜನಾ ಆಡಳಿತ ಮಂಡಳಿ (PGB) ಯು ದಿನಾಂಕ 24–05–2013 ರಂದು ನಡೆದ ಸಭೆಯಲ್ಲಿನ ನಿರ್ಧಾರದಂತೆ, ಈ ಕಾಮಗಾರಿಗಳಿಗೆ ಸ್ವೀಕರಿಸಲಾದ ಟೆಂಡರ್‌ಗಳನ್ನು ತಿರಸ್ಕರಿಸಿ ಸಾಮಾನ್ಯ ಐಟಂ ದರ ಗುತ್ತಿಗೆಯ ಆಧಾರದ ಮೇಲೆ ಮರು ಟೆಂಡರ್ ಕರೆಯಲು ವಿಶ್ವ ಬ್ಯಾಂಕ್‌ನಿಂದ ದಿನಾಂಕ 21–06–2014 ರಂದು ಅನುಮೋದನೆ ಪಡೆದು ದಿನಾಂಕ 27–07–2014 ರಂದು

ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಿಸಲಾಯಿತು. ಸದರಿ ಕಾಮಗಾರಿಯ ಅಂದಾಜು ಮೊತ್ತ ₹ 298.4 ಕೋಟಿಗಳಾಗಿರುತ್ತವೆ.

ಸದರಿ ಕಾಮಗಾರಿಗೆ, ಐಟಂ ರೇಟ್ ಟೆಂಡರ್‌ನ್ನು ಕರೆಯಲಾಗಿ ಒಟ್ಟು ಐದು ಗುತ್ತಿಗೆದಾರರು ಬಿಡ್ಡ್‌ಗಳನ್ನು ಸಲ್ಲಿಸಿದ್ದು, ಅವುಗಳಲ್ಲಿ ಮೂವರು ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದಿಲ್ಲ, ಉಳಿದ ಇಬ್ಬರು ಗುತ್ತಿಗೆದಾರರಲ್ಲಿ ಒಬ್ಬರು ತಮ್ಮ ಬಿಡ್ಡಿಂಗ್ ದಾಖಲಾತಿಗಳನ್ನು ಸಲ್ಲಿಸುವ ಸಮಯದಲ್ಲಿ ಈ ಹಿಂದೆ ಬೇರೊಂದು ಕಾಮಗಾರಿಯಲ್ಲಿನ ವಿಷಯಗಳನ್ನು ಮರೆಮಾಚಿದ್ದರಿಂದ ಹಾಗೂ ಮತ್ತೊಬ್ಬ ಬಿಡ್ಡರು ಈ ಹಿಂದೆ ಕೆಶಿಪ್–2 ನಲ್ಲಿನ ಎಡಿಬಿ ಟೆಂಡರ್ ಪ್ರಕ್ರಿಯೆ ಸಮಯದಲ್ಲಿ ತಪ್ಪು ಮಾಹಿತಿ ದಾಖಲಾತಿಗಳನ್ನು ಸೃಷ್ಟಿಸಿ ಸಲ್ಲಿಸಿದ್ದರಿಂದ ಇವುಗಳನ್ನು ಟೆಂಡರ್ ನಿಯಮಾವಳಿಗಳ ಉಲ್ಲಂಘನೆಯೆಂದು ಪರಿಗಣಿಸಿ, ಯೋಜನಾ ಆಡಳಿತ ಮಂಡಳಿಯ ಸದರಿ ಕಾಮಗಾರಿಗೆ ಸ್ವೀಕರಿಸಲಾದ ಟೆಂಡರ್‌ಗಳನ್ನು ತಿರಸ್ಕರಿಸಿ ಮರು ಟೆಂಡರ್ ಕರೆಯಲು ವಿಶ್ವ ಬ್ಯಾಂಕಿನ ಅನುಮೋದನೆ ಪಡೆಯಲು ಸೂಚಿಸಿತು

ಆದರೆ, ಈ ಎಡರೂ ಗುತ್ತಿಗೆದಾರರ ಬಿಡ್‌ಗಳನ್ನು ದಿನಾಂಕ 22–12–2014 ರಂದು ವಿಶ್ವ ಬ್ಯಾಂಕ್ ಕೆಲವು ಸಲಹೆಗಳನ್ನು ನೀಡಿದಂತೆ ಟೆಂಡರ್ ನಿಯಮಾವಳಿ ಹಾಗೂ ತಾಂತ್ರಿಕ ಮೌಲ್ಯಮಾಪನದ ಆಧಾರದ ಮೇಲೆ ತಾಂತ್ರಿ ಮೌಲ್ಯಮಾಪನವನ್ನು ಪೂರ್ಣಗೊಳಿಸಿ, ದಿನಾಂಕ: 14–01–2015 ರಂದು ನಡೆದ ಯೋಜನಾ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ, ಅನುಮೋದನೆಯನ್ನು ಪಡೆದು ಈ ಎರಡೂ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿನಾಂಕ 16–02–2015 ರಂದು ವಿಶ್ವ ಬ್ಯಾಂಕ್ ಅನುಮೋದನೆ ನೀಡಿರುತ್ತದೆ.

ಅದರಂತೆ, ತಾಂತ್ರಿಕವಾಗಿ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ 23–02–2015 ರಂದು ತೆರೆಯಲಾಗಿದ್ದು, ಕಡಿಮೆ ಮೊತ್ತ ನಮೂದಿಸಿರುವ ಮೆ. ಸದ್ಭವ್ ಇಂಜಿನಿಯರಿಂಗ್ ಲಿ., ರವರ ಆರ್ಥಿಕ

ಬಿಡ್‌ನ್ನು ಅಂಗೀಕರಿಸಲು ಯೋಜನಾ ಆಡಳಿತ ಮಂಡಳಿಯ ಶಿಫಾರಸ್ಸಿನೊಂದಿಗೆ ವಿಶ್ವ ಬ್ಯಾಂಕಿನ ಅನುಮೋದನೆಗೆ ದಿನಾಂಕ 12–03–2015 ರಂದು ಸಲ್ಲಿಸಲಾಗಿರುತ್ತದೆ. ವಿಶ್ವ ಬ್ಯಾಂಕಿನ ಅನುಮೋದನೆ ದೊರಕಿದೆ ನಂತರ, ಗುತ್ತಿಗೆದಾರರಿಗೆ ಟೆಂಡರ್ ಒಪ್ಪಿಗೆ ಪತ್ರವನ್ನು ನೀಡಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಈ ಅವಧಿಯವರೆಗೆ ರಸ್ತೆಯ ನಿರ್ವಹಣೆ ಲೋಕೋಪಯೋಗಿ ಇಲಾಖೆಯ ವತಿಯಿಂದ ಮಾಡಲಾಗುತ್ತಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕಿನ ಅನುಮೋದನೆ ಸಿಗುವವರೆಗೆ ಕಾಯುತ್ತೇವೆಂದು ಏನು ಹೇಳಿದ್ದೀರಿ, 2010 ರಿಂದ ಇಲ್ಲಿಯವರೆಗೆ ವಿಶ್ವಬ್ಯಾಂಕಿನಲ್ಲಿ ಓಡಾಡುತ್ತಿದೆ.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕಿನ ಅನುಮೋದನೆಗೆ ದಿನಾಂಕ 12–03–2015 ರಂದು ಸಲ್ಲಿಸಲಾಗಿರುತ್ತದೆ. ವಿಶ್ವಬ್ಯಾಂಕ್ ಯಾವ ಗಳಿಗೆಯಲ್ಲಾದರೂ ಒಪ್ಪಿಗೆ ಕೊಡುತ್ತದೆ ಆಗ ನಾವು work Order issue ಮಾಡುತ್ತೇವೆ. ಅಲ್ಲಿಯ ತನಕ PWD ಇಲಾಖೆಯಿಂದ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ನಾವು ವಹಿಸಿಕೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ನಿರ್ವಹಣೆಗೆ 4 ಕೋಟಿ ರೂ.ಗಳನ್ನು ಕೊಡಿಸುತ್ತೇವೆಂದು ಅಪೆಂಡಿಕ್ಸ್–ಸಿ ನಲ್ಲಿ ತಾವು ಹೇಳಿದ್ದಿರಿ.

ಡಾ॥ ಹೆಚ್.ಸಿ. ಮಹಾದೇವಪ್ಪ:– It is in the final stage. The moment world bank gives approval, we will issue the work order. Till then the PWD will maintain the road.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಸಚಿವರೆ, ಅಪೆಂಡಿಕ್ಸ್–ಸಿ ನಲ್ಲಿ ನಿರ್ವಹಣೆಗಾಗಿ 4 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದಿರಿ. ಅಪೆಂಡಿಕ್ಸ್–ಸಿ ಇಲ್ಲಿಯವರೆಗೆ approval ಆಗಿಲ್ಲ. 4 ಕೋಟಿ ರೂ.ಗಳನ್ನು

ಅಪೆಂಡಿಕ್ಸ್-ಸಿ ಯಿಂದ ಬಿಟ್ಟು ಕೊಡಿಸುತ್ತೇವೆಂದು ಹೇಳಿದರೆ ನನ್ನ ಪ್ರಶ್ನೆ ಮುಗಿಯುತ್ತದೆ.

ಡಾ॥ ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ approve ಮಾಡುವವರೆಗೆ ಅದರ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆಯಿಂದ ನಾವು Mainrtain ಮಾಡುತ್ತೇವೆಂದು ಹೇಳಿದ ಮೇಲೆ it holds good.

ಅಧ್ಯಕ್ಷರು:- ಮಾನ್ಯ ವಿ. ಸುನೀಲ್‌ಕುಮಾರ್ ಮಾತನಾಡಿ.

ಶ್ರೀ ವಿ. ಸುನೀಲ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲ.

ಅಧ್ಯಕ್ಷರು:- ನಾಳೆಗೆ ತೆಗೆದುಕೊಳ್ಳೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಅದು ಒಂದು ಗಂಭೀರ ವಿಷಯ ಇರುವುದರಿಂದ ನಾಳೆ ತೆಗೆದುಕೊಳ್ಳಬೇಕು ಮತ್ತು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟರೆ ಹೆಚ್ಚು ಅನುಕೂಲವಾಗುತ್ತದೆ.

ಅಧ್ಯಕ್ಷರು:- ಆಯಿತು. ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 7 ಗಂಟೆ 17 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 17-03-2015ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)